# ನಿಮ್ಮೊಡನೆ

## ರಾಜಕೀಯದಲ್ಲಿ ಮಹಿಳೆ

ಅತ್ತ ಸಂಸತ್ತಿನಲ್ಲಿ ಶೇಕಡಾ 33ರ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರದ ಹೊಸ್ತಿಲಲ್ಲಿದೆ. ಇತ್ತ ಕರ್ನಾಟಕದ ಗ್ರಾಮ ಪಂಚಾಯ್ತಿಗಳಲ್ಲಿ ಮಹಿಳೆಯರ ಮೀಸಲಾತಿಯನ್ನು ಶೇಕಡಾ 33ರಿಂದ ಶೇಕಡಾ 50ಕ್ಕೆ ಏರಿಸುವುದಾಗಿ ಸರಕಾರ ಪ್ರಕಟಿಸಿದೆ. ಆಡಳಿತದಲ್ಲಿ ಮಹಿಳೆಯರ ಪಾಲುದಾರಿಕೆ ಹೆಚ್ಚಿಸುವ ಬಹಳ ವರ್ಷಗಳ ಕನಸು ಈಗಲಾದರೂ ನನಸಾಗುತ್ತಿರುವುದು ಒಳ್ಳೆಯದೇ.




ಕೊನೆಗೂ ರಾಜಕೀಯದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚುವ ದಿನಗಳು ಹತ್ತಿರವಾಗಿವೆ. ಅತ್ತ ಸಂಸತ್ತಿನಲ್ಲಿ ಶೇಕಡಾ 33ರ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರದ ಹೊಸ್ತಿಲಲ್ಲಿದೆ. ಇಲ್ಲಿ ಕರ್ನಾಟಕದಲ್ಲಿ ಗ್ರಾಮ ಪಂಚಾಯ್ತಿಗಳಲ್ಲಿ ಮಹಿಳೆಯರ ಮೀಸಲಾತಿಯನ್ನು ಶೇಕಡಾ 33ರಿಂದ ಶೇಕಡಾ 50ಕ್ಕೆ ಏರಿಸುವುದಾಗಿ ಸರಕಾರ ಪ್ರಕಟಿಸಿದೆ. ಆಡಳಿತದಲ್ಲಿ ಮಹಿಳೆಯರ ಪಾಲುದಾರಿಕೆ ಹೆಚ್ಚಿಸುವ ಬಹಳ ವರ್ಷಗಳ ಕನಸು ಈಗಲಾದರೂ ನನಸಾಗುತ್ತಿರುವುದು ಒಳ್ಳೆಯದೇ.

ಲೋಕಸಭೆಯಲ್ಲಿ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಸ್ಥಾನಗಳನ್ನು ಮೀಸಲಾಗಿಡುವ ವಿಚಾರ ಪ್ರಸ್ತಾಪವಾಗಿ ಆಗಲೇ 7–8 ವರ್ಷಗಳು ಕಳೆದಿವೆ. ಈ ಕುರಿತು ಸಾಕಷ್ಟು ಸಾರ್ವಜನಿಕ ಚರ್ಚೆಯೂ ನಡೆದಿದೆ. ಜನಸಂಖ್ಯೆಯಲ್ಲಿ ಶೇಕಡಾ 50ರಷ್ಟಿರುವ ಮಹಿಳೆಯರು ರಾಜಕೀಯ ಅಧಿಕಾರಗಳಲ್ಲಿ ಶೇಕಡಾ 10ರಷ್ಟು ಪಾಲು ಕೂಡಾ ಪಡೆದಿಲ್ಲ ಎನ್ನುವುದು ಜನತಂತ್ರವಾದಿ ಸಮಾಜಕ್ಕಂತೂ ನಾಚಿಕೆಯ ವಿಷಯವೇ. ಈ ಸಾಮಾಜಿಕ ತಾರತಮ್ಯವನ್ನು ಹೋಗಲಾಡಿಸಲು ಮೀಸಲಾತಿಯ ಮೂಲಕ ಮಹಿಳೆಯರ ಸ್ಥಾನ ಭದ್ರಪಡಿಸುವುದೊಂದೇ ಈಗಿರುವ ಮಾರ್ಗ. ಹಾಗೆ ನೋಡಿದರೆ, ಚುನಾವಣೆಯಲ್ಲಿ ಸ್ಪರ್ಧಿಸಲು ಆಯಾ ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಒಳಗೆಯೇ ಟಿಕೆಟ್ ಹಂಚಿಕೆಯಲ್ಲಿ ಶೇಕಡಾ 50ರಷ್ಟನ್ನು ಮಹಿಳೆಯರಿಗೆ ಮೀಸಲು ಇಡಬೇಕಿತ್ತು. ಮಹಿಳೆಯರೇ ಅಧ್ಯಕ್ಷರಾಗಿರುವ ಪಕ್ಷಗಳೂ ಇಂತಹ ಕೆಲಸಕ್ಕೆ ಕೈಹಾಕಿಲ್ಲ. ಕಣ್ಣೊರಸುವುದಕ್ಕೆ ಒಂದಿಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ಕೊಡುವುದು ಚುನಾವಣೆಯಲ್ಲಿ ಪ್ರತಿಸಲ ನಡೆದುಕೊಂಡು ಬರುತ್ತಿರುವ ಸಂಪ್ರದಾಯ.

ಕಾಂಗ್ರೆಸ್ ನೇತೃತ್ವದ ಆಳುವ ಯುಪಿಎ ರಂಗ ಎರಡು ವರ್ಷಗಳ ಹಿಂದೆಯೇ ರಾಜ್ಯಸಭೆಯಲ್ಲಿ ಮಹಿಳಾ ಮೀಸಲು ಮಸೂದೆಯನ್ನು ಮಂಡಿಸಿದೆ. ಆದರೆ ಮಸೂದೆಗೆ ಸಮ್ಮತಿ ಪಡೆಯುವಲ್ಲಿ ಹಲವು ಅಡ್ಡಿಗಳನ್ನು ಒಡ್ಡಲಾಯಿತು. ಮಸೂದೆಯನ್ನು ಸಮಾಜವಾದಿ ಪಕ್ಷ, ಆರ್‌ಜೆಡಿ, ಬಹುಜನ ಸಮಾಜ ಪಕ್ಷ, ಜೆಡಿ–ಯುಗಳು ನೇರವಾಗಿಯೇ ವಿರೋಧಿಸುತ್ತಿವೆ. ಹಾಗೆಂದು ಕಾಂಗ್ರೆಸ್ ಮತ್ತು ಬಿಜೆಪಿ ಗಳು ಈ ವಿಷಯದಲ್ಲಿ ಸಾಚಾ ಎನ್ನುವಂತಿಲ್ಲ. ವಿರೋಧಿಸುವ ಪಕ್ಷಗಳ ನೇತಾರರ ವಿರೋಧವನ್ನೇ ನೆಪವಾಗಿಟ್ಟುಕೊಂಡು ಕಾಂಗ್ರೆಸ್– ಬಿಜೆಪಿಯ ಪುರುಷ ಸಂಸದರೂ ನಸುಗುನ್ನಿಯಂತೆ ವರ್ತಿಸಿದ್ದಾರೆ.

ಮಹಿಳಾ ಮೀಸಲಾತಿಯ ಮಸೂದೆ ಈಗಿರುವ ಸ್ವರೂಪದಲ್ಲಿ ಪರಿಪೂರ್ಣ ಅಲ್ಲದೇ ಇರಬಹುದು. ಬಹುತೇಕ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ರಾಜಕೀಯ ಪ್ರಬುದ್ಧತೆ ಇರುವ ಮಹಿಳಾ ಅಭ್ಯರ್ಥಿಗಳು ಸಿಗದೆ ಇರಬಹುದು. ಹಾಗೆಯೇ ಮಹಿಳಾ ಮೀಸಲಾತಿಯ ಮೂಲಕ ಎಲ್ಲ ಪಕ್ಷಗಳಲ್ಲೂ ಮೇಲ್ಜಾತಿಯ ಮಹಿಳೆಯರೇ ಅಧಿಕಾರ ಕಬಳಿಸಿ, ಮಹಿಳೆಯರ ಒಳಗೆಯೇ ಸಾಮಾಜಿಕ ಅಸಮಾನತೆಯ ಸ್ವರೂಪ ಉಂಟಾಗಬಹುದು. ಹಾಗೆಂದು ಈ ವಿಷಯವನ್ನು ಸದಾ ವಿವಾದವಾಗಿಸುತ್ತ ನನೆಗುದಿಗೆ ಹಾಕುವುದರಲ್ಲಿ ಅರ್ಥವಿಲ್ಲ. ಪರಸ್ಪರ ಕುಳಿತು ತಾಳ್ಮೆಯಿಂದ ಈ ವಿಷಯವನ್ನೂ ಚರ್ಚಿಸಿ, ದುರ್ಬಲ ಜಾತಿಗಳ ಮಹಿಳೆಯರಿಗೆ ಒಳ ಮೀಸಲಾತಿಯನ್ನೂ ಕಲ್ಪಿಸಬೇಕು.

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರು ಅಧಿಕಾರಕ್ಕೆ ಬಂದ ಆರಂಭದಲ್ಲಿ ಅವರ ಹಿಂದಿರುವ ಪುರುಷರು ಪರೋಕ್ಷ ಅಧಿಕಾರ ಚಲಾಯಿಸಿರಬಹುದು. ಆದರೆ ಇವತ್ತು ಮಹಿಳೆಯರು ಅಧಿಕಾರ ಹೊಂದಿರುವ ಬಹಳಷ್ಟು ಸ್ಥಳೀಯ ಸಂಸ್ಥೆಗಳಲ್ಲಿ ಆರ್ಥಿಕ ಅವ್ಯವಹಾರಗಳು ಕಡಿಮೆಯಾಗಿವೆ. ಪಾರದರ್ಶಕ ನೀತಿಯಿಂದಾಗಿ, ಆಡಳಿತವೂ ಚುರುಕಾಗಿದೆ. ಆರಂಭದಲ್ಲಿ ಕಾಣಿಸಿದ ಲೋಪದೋಷಗಳೂ ಈಗಿಲ್ಲ.

ಎಲ್ಲ ರಾಜಕೀಯ ಪಕ್ಷಗಳೂ ಈ ವಿಷಯವನ್ನು ರಾಜಕೀಯ ಲಾಭ–ನಷ್ಟದ ಪ್ರಶ್ನೆಯನ್ನಾಗಿ ಮಾಡಿಕೊಂಡಿರುವುದು ವಿಷಾದನೀಯ. ಈಗಾಗಲೆ ರಾಷ್ಟ್ರಪತಿ, ಲೋಕಸಭಾ ಸ್ಪೀಕರ್ ಮುಂತಾದ ಹುದ್ದೆಗಳನ್ನು ಮಹಿಳೆಯರು ನಿರ್ವಹಿಸುವ ಮೂಲಕ ತಾವು ಪುರುಷರಿಗೆ ಯಾವ ರೀತಿಯಲ್ಲೂ ಕಡಿಮೆಯಲ್ಲ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಹಾಗೆಯೇ ಕಾಂಗ್ರೆಸ್, ಬಹುಜನ ಸಮಾಜ ಪಕ್ಷ, ತೃಣಮೂಲ ಕಾಂಗ್ರೆಸ್, ಅಣ್ಣಾ ಡಿಎಂಕೆ ಮುಂತಾದ ಪಕ್ಷಗಳ ನೇತೃತ್ವವನ್ನೂ ಮಹಿಳೆಯರೇ ವಹಿಸಿ, ರಾಜಕೀಯ ಪಕ್ಷವನ್ನು ಮುನ್ನಡೆಸಲು ಕೂಡಾ ತಾವು ಸಮರ್ಥರು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲನ್ನು ಶೇಕಡಾ 33ರಿಂದ 50ಕ್ಕೆ ಹೆಚ್ಚಿಸುವ ಮುಖ್ಯಮಂತ್ರಿಯವರ ನಿರ್ಧಾರವೂ ಶೀಘ್ರ ಜಾರಿಗೆ ಬರಲಿ. ಈಗಾಗಲೆ ಕರ್ನಾಟಕದ ಸಚಿವ ಸಂಪುಟದಲ್ಲಿ ಕನಿಷ್ಠ ಒಬ್ಬ ಮಹಿಳೆಗೂ ಪ್ರಾತಿನಿಧ್ಯ ನೀಡದೆ, ಹೊಸ ಕೆಟ್ಟ ಸಂಪ್ರದಾಯವನ್ನು ಹುಟ್ಟು ಹಾಕಿರುವ ಮುಖ್ಯಮಂತ್ರಿ ಗಳು ಆ ಬಗ್ಗೆಯೂ ಆತ್ಮವಿಮರ್ಶೆ ಮಾಡಿಕೊಳ್ಳಲಿ. ಶೇಕಡಾ 50 ಮಹಿಳಾ ಮೀಸಲಾತಿಯನ್ನು ತಮ್ಮ ಸಚಿವ ಸಂಪುಟದಲ್ಲೂ ಶೀಘ್ರ ಜಾರಿಗೆ ತರಲಿ.

■ ಬಿ.ಎಂ. ಹನೀಫ್